# ಆಧ್ಯಾತ್ಮಿಕ ಜೀವನದಲ್ಲಿ ವಿಶ್ವಾಸ

ಬ್ರ.ನಾರಾಯಣ

**ಜೀವನದಲ್ಲಿ ಶ್ರದ್ಧೆಯ ಪ್ರಾಮುಖ್ಯವನ್ನು ಒತ್ತಿ ಹೇಳುವ ಬ್ರ.ನಾರಾಯಣ ಅವರು ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿರುವರು.**

## "ವಿಶ್ವಾಸ"ಎಂದರೇನು?

"**ವಿಶ್ವಾಸವೇ ಜೀವನದ ತಳಹದಿ**" ಎನ್ನುವುದು ಸರಳವಾದ ಮಾತಾದರೂ, ಈ ಮಾತಿನ ಹಿಂದಿರುವ ಅರ್ಥವ್ಯಾಪ್ತಿಯನ್ನು ಅಳೆಯುವುದು ಅಷ್ಟು ಸುಲಭವಲ್ಲ. ವಿಶ್ವಾಸ ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಬಂಧವನ್ನು ನಿರ್ಧರಿಸುತ್ತದೆ; ಮಾತ್ರವಲ್ಲ, ಸಾಮಾಜಿಕ ಜೀವನದಲ್ಲಿ ಒಂದು ಮೌಲ್ಯವಾಗಿಯೂ ಮಾನ್ಯತೆಯನ್ನು ಪಡೆಯುತ್ತವೆ. "ಪ್ರೀತಿ-ವಿಶ್ವಾಸಗಳೇ ಇಲ್ಲದಿದ್ದಮೇಲೆ ಬದುಕಿನಲ್ಲಿ ಇನ್ನೇನಿದೆ?" ಎಂದು ಗೋಳಾಡುವ ಹತಾಶೆಯ ಮಾತು, ಈ ಮೌಲ್ಯಗಳನ್ನು ಇಡೀ ಬದುಕಿನೊಂದಿಗೆ ಸಮೀಕರಿಸುತ್ತದೆ.

ಒಬ್ಬನು ಇನ್ನೊಬ್ಬನಲ್ಲಿ ವಿಶ್ವಾಸವಿಡಬೇಕಾದರೆ, ಅವನಿಂದ ಕೆಲವು ಗುಣಗಳನ್ನು ನಿರೀಕ್ಷಿಸುತ್ತಾನೆ. ಅದರಲ್ಲಿ ಪ್ರಧಾನವಾದದ್ದು ಸತ್ಯಸಂಧತೆ. ಹೇಳಿದ ಸಮಯಕ್ಕೆ ಬಾರದಿದ್ದರೆ, ಒಪ್ಪಿದ ದಿನದಂದೇ ಒಯ್ದ ವಸ್ತುವನ್ನು ಹಿಂದಿರುಗಿಸದಿದ್ದರೆ, ಕೊಟ್ಟ ಮಾತಿನಂತೆ ನಡೆಯದಿದ್ದರೆ ವಿಶ್ವಾಸ ನಿಲ್ಲುವುದು ಹೇಗೆ? ಆಡಿದಂತೆ ನಾವು ನಡೆದಷ್ಟೂ ನಮ್ಮ ಮೇಲೆ ಇತರರಿಗೆ ವಿಶ್ವಾಸ ವರ್ಧಿಸುತ್ತದೆ. "ವರ್ಧಿಸುತ್ತದೆ" ಎಂಬುದು ಮುಖ್ಯ. ವಿಶ್ವಾಸ ಒಂದೇ ರೀತಿ ಯಾವಾಗಲೂ ಇರಲಾರದು; ಒಬ್ಬನ ಗುಣ, ನಡತೆ, ವರ್ತನೆಗಳಿಗೆ ಅನುಗುಣವಾಗಿ ಅದು ಹೆಚ್ಚುತ್ತಾ ಹೋಗಬಹುದು. ಅದೇ ರೀತಿ ವಿಶ್ವಾಸ ಕಡಿಮೆಯಾಗುತ್ತ ಹೋಗಿ, ಕೊನೆಗೆ ಇನ್ನೊಬ್ಬರ ಮೇಲಿಟ್ಟ ವಿಶ್ವಾಸವನ್ನು ಸಂಪೂರ್ಣ ಕಳೆದುಕೊಳ್ಳಲೂಬಹುದು. ಒಂದು ಬಾರಿ ಒಬ್ಬನಲ್ಲಿ ವಿಶ್ವಾಸ ಮೂಡುವುದೇ ಮುಖ್ಯವಲ್ಲ; ಅದು ಎಷ್ಟು ಕಾಲ ಉಳಿಯುತ್ತದೆ ಎಂಬುದು ಮುಖ್ಯ. ಬಹಳ ವರ್ಷಗಳಿಂದ ಇಬ್ಬರಲ್ಲಿ ವಿಶ್ವಾಸ ದೃಢವಾಗಿ ನಿಂತಿದೆಯೆಂದರೆ ಅವರು ಪರಸ್ಪರರ ಗುಣದೋಷಗಳನ್ನು ಚೆನ್ನಾಗಿ ಅರಿತುಕೊಂಡಿದ್ದಾರೆ; ಅವರು ತಮ್ಮ ತಮ್ಮ ದೌರ್ಬಲ್ಯ, ಸಾಮರ್ಥ್ಯಗಳೊಂದಿಗೆ ಪರಸ್ಪರ ಒಪ್ಪಿಕೊಂಡಿದ್ದಾರೆ ಎಂದರ್ಥ. ಸಾರ್ವಜನಿಕ ಜೀವನದಲ್ಲಿ ಹೇಗೋ ಹಾಗೆ ಕೌಟುಂಬಿಕ ವಲಯದಲ್ಲೂ ವಿಶ್ವಾಸ ಮುಖ್ಯ. ಆದರೆ ಇಲ್ಲಿ ವಿಶ್ವಾಸದ ಅನಿವಾರ್ಯತೆ ಹೆಚ್ಚು. ಕುಟುಂಬ ಜೀವನವೇ ಸಮಾಜದ ಪ್ರಧಾನ ಘಟಕವಾಗಿರುವ ನಮ್ಮ ದೇಶದಲ್ಲಿ ಈ ವಲಯದೊಳಗಾದರೂ ವಿಶ್ವಾಸವೆಂಬ ಮೌಲ್ಯ ಸಾರ್ವತ್ರಿಕವಾಗಿ ಸ್ವೀಕೃತವಾಗಿದೆ ಎನ್ನಬಹುದು. ಇದಕ್ಕೆ ಭಂಗ ಬಂದಿರುವಲ್ಲೆಲ್ಲ ಸಂಘರ್ಷ, ಒಳಜಗಳ, ಅಶಾಂತಿ, ಮತ್ಸರವೇ ಮೊದಲಾದ ಕೆಡುಕುಗಳ ತಾಂಡವನೃತ್ಯ ಕಂಡುಬರುತ್ತದೆ.

> ಸಂಶಯವು ಪ್ರವೇಶಿಸುವ ಬಾಗಿಲಿನಂದಲೇ ಪ್ರೀತಿ ವಿಶ್ವಾಸಗಳು ಹೊರಹೋಗುವುವು.
>
> —ಎಡ್ವರ್ಡ್ ಯಂಗ್ (Edward Young)

## ಅವಿಶ್ವಾಸ—ಒಂದು ರೋಗ

ಭಗವದ್ಗೀತೆಯ **ಸಂಶಯಾತ್ಮಾ ವಿನಶ್ಯತಿ** ಎಂಬ ಮಾತು ಬಹಳ ಪ್ರಸಿದ್ಧವಾಗಿದೆ. ಅಂಥವನಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ ಎಂದು ಶ್ರೀಕೃಷ್ಣ ಹೇಳುತ್ತಾನೆ. ಮನುಷ್ಯನ ಮನೋವ್ಯಾಪಾರಗಳನ್ನು ಸಮಗ್ರವಾಗಿ ಅವಲೋಕಿಸಿ, ವಿಶ್ವಾಸವೆಂಬ ಗುಣವನ್ನೇ ಕಳೆದುಕೊಳ್ಳುವವರ ಬಗ್ಗೆ ಕೊನೆಯದಾಗಿ ಹೇಳಬಹುದಾದ ಮಾತು ಇದು. ಸಂದೇಹವೆನ್ನುವ ಚಿತ್ತವೃತ್ತಿ ಮೊದಲು ಮನಸ್ಸಿನೊಳಗೆ ಪ್ರವೇಶಿಸಿತೆಂದರೆ, ಮುಂದೆ ಅದರ ಸಾಮ್ರಾಜ್ಯ ವಿಸ್ತರಣೆ ಮೇರೆಯಿಲ್ಲದೆ ನಡೆಯುತ್ತದೆ. ಸಂದೇಹ ಪ್ರವೃತ್ತಿ ತಪ್ಪಲ್ಲ; ಬೆಳವಣಿಗೆಯಲ್ಲಿ ಅದು ನಿರ್ದಿಷ್ಟವ್ಯಾಪ್ತಿಯ ತನಕ ಅವಶ್ಯಕವೇ ಆಗಿದೆ. ಆದರೆ ಎಲ್ಲಿಯತನಕ ಸಂದೇಹ ಪಡಬಹುದು, ಎಲ್ಲಿಂದಾಚೆಗೆ ಅಲ್ಲ—ಎಂಬ ವಿವೇಕವನ್ನು ಕಳೆದುಕೊಂಡರೆ, ಹಾದಿ ತಪ್ಪಿದಂತೆ. ತನ್ನ ಸುತ್ತಮುತ್ತಲಿನವರ ಬಗ್ಗೆ ಸಂದೇಹ, ಅವರೆಲ್ಲರೂ ಸೇರಿಕೊಂಡು ತನ್ನ ಮೇಲೆ ಏನೋ ಸಂಚು ನಡೆಸುವಂತೆ, ತಾನು ಅದಕ್ಕೆ ಬಲಿಯಾಗಲಿರುವಂತೆ—ಏನೇನೋ ಸಂದೇಹ ಹಬ್ಬಿಸಿಕೊಂಡು ನಾನಾ ಬಗೆಯ ಕೀಳರಿಮೆ, ಮೇಲರಿಮೆಗಳಿಂದ ಬಳಲುವ ವ್ಯಕ್ತಿಗಳಿಗೇನೂ ಕೊರತೆಯಿಲ್ಲ. ಬರಬರುತ್ತ ಅವರಿಗೆ ತಮ್ಮವರು ಎನ್ನಿಸಿಕೊಂಡವರ ಬಗೆಗೂ ಸಂದೇಹ, ಕೊನೆಗೆ ತಮ್ಮಲ್ಲೇ ಸಂದೇಹ. ತಾನೊಬ್ಬ ವ್ಯಕ್ತಿ ಹೌದೇ ಅಲ್ಲವೇ; ತಾನು ಎಲ್ಲರಂತಿದ್ದೇನೆಯೇ ಇಲ್ಲವೇ; ಇತ್ಯಾದಿ ಮನೋವಿಕಾರಗಳು ಕಾಣಿಸಿಕೊಳ್ಳುವವು. ಅಂಥ ವ್ಯಕ್ತಿ ಯಾವ ಸಂತೋಷವನ್ನು ಅನುಭವಿಸುತ್ತಾನೆ? ಜಗತ್ತೆಲ್ಲವೂ ಮೋಸ, ಕಪಟತನವೇ ಜೀವನ, ರಾಜಕೀಯವೇ ಬದುಕಿನ ದಾರಿ—ಎಂಬ ಧೋರಣೆ ತಾಳಿದವರಲ್ಲಿ ಇಂಥ ಅವಿಶ್ವಾಸದ ರೋಗ ಒಂದಲ್ಲ ಒಂದು ರೀತಿ ಪ್ರವೇಶಿಸಿರುವುದನ್ನು ಗುರುತಿಸಬಹುದು. ಈ ಅರ್ಥದಲ್ಲಿ ಗೀತೆಯ ಮಾತು ಒಟ್ಟು ಮನುಷ್ಯನ ಸಮಗ್ರ ಜೀವನಕ್ಕೆ ಸಂಬಂಧಿಸಿದ್ದು. ಅವಿಶ್ವಾಸ ಹಲವರಲ್ಲಿ ಮೂಡಿ ಮರೆಯಾಗುವ ಒಂದು ಚಿತ್ತವೃತ್ತಿಯಾದರೆ, ಕೆಲವರಲ್ಲಿ ಅದು ಬೃಹದಾಕಾರವಾಗಿ ಬೆಳೆದು ಅವರ ಜೀವವನ್ನೇ ಹಿಂಡುವ ಹಿಂಸೆಯಾಗಿ ಮಾರ್ಪಡುತ್ತದೆ. ಇದು ವಿಶ್ವಾಸವೆಂಬ ಸಮತೋಲನದಿಂದ ಕೆಳಜಾರಿದ ಮನಸ್ಸಿನ ಒಂದು ಕೊನೆ. ಇಂಥವರ ಒಳಬದುಕು ಯಾರಿಗೂ ಹೇಳಿಕೊಳ್ಳಲಾಗದ ಯಾತನೆಯಿಂದ ತುಂಬಿರುತ್ತದೆ.

## ಆಧ್ಯಾತ್ಮಿಕ ಜೀವನದಲ್ಲಿ ವಿಶ್ವಾಸ

ವಿಶ್ವಾಸವು ಜೀವನದ ತಳಹದಿಯಾದರೆ, ಆಧ್ಯಾತ್ಮಿಕ ಜೀವನದ ಆರಂಭ ಅದರಿಂದಲೇ ಎನ್ನಬಹುದು. ಲೌಕಿಕ ಜೀವನದಲ್ಲಿ ಮೂರ್ತ ಅನುಭವಗಳು ವಿಶ್ವಾಸದ ಹುಟ್ಟಿಗೆ ಹೇಗೆ ಕಾರಣವಾಗುವವೋ ಹಾಗೆ ಆಧ್ಯಾತ್ಮಿಕ ಜೀವನದಲ್ಲಿ ಅವು ಕಾರಣವಾಗುವುದಿಲ್ಲ. ಏಕೆಂದರೆ ಆಧ್ಯಾತ್ಮಿಕ ಜೀವನದಲ್ಲಿ ಮೊದಲು ವಿಶ್ವಾಸ, ಅನಂತರ ಅದನ್ನು ಅವಲಂಬಿಸಿಯೇ ಉಳಿದ ಆಧ್ಯಾತ್ಮಿಕ ಅನುಭವಗಳು. ಆದ್ದರಿಂದ ಕಣ್ಣಿಗೆ ಕಾಣದ ಪರಮಾಣುವನ್ನು ಗುರುತಿಸಲು ವೈಜ್ಞಾನಿಕ ಪ್ರಯೋಗಗಳು ಒಂದು ಪ್ರಾಥಮಿಕ ಅವಶ್ಯಕತೆಯಾಗಿರುವಂತೆ, ಇಂದ್ರಿಯ-ಮನಸ್ಸುಗಳಿಗೆ ನಿಲುಕದ ಆಧ್ಯಾತ್ಮಿಕ ಸತ್ಯಗಳನ್ನು ಅನುಭವಿಸಲು ಅದರಲ್ಲಿ ನಂಬಿಕೆಯಿಡುವುದೇ ಮೊದಲ ಹೆಜ್ಜೆ. ಆಧ್ಯಾತ್ಮಿಕ ಜೀವನದಲ್ಲಿ ಶ್ರದ್ಧೆಯ ಪ್ರಾಮುಖ್ಯವನ್ನು ಒತ್ತಿ ಹೇಳುತ್ತ ವ್ಯಾಸರು ತಮ್ಮ ಯೋಗಸೂತ್ರ ಭಾಷ್ಯದಲ್ಲಿ ಹೇಳುತ್ತಾರೆ: **ಸಾ ಹಿ ಜನನೀವ ಕಲ್ಯಾಣೀ ಯೋಗಿನಂ ಪಾತಿ |** "ಕಲ್ಯಾಣಸ್ವರೂಪಿಯಾದ ಶ್ರದ್ಧೆಯು ಜನನಿಯಂತೆ ಯೋಗಿಯನ್ನು ಕಾಪಾಡುತ್ತದೆ."

> **ಅಗೋಚರವಾದುದನ್ನು ನಂಬುವುದು ಶ್ರದ್ಧೆ. ಇದರ ಪ್ರತಿಫಲವಾಗಿ ನಾವು ಏನನ್ನು ನಂಬುತ್ತೇವೆಯೊ ಅದು ಗೋಚರವಾಗುತ್ತದೆ. —ಸಂತ ಅಗಸ್ಟೀನ್ (St.Augustine)**

ಆದರೆ ಆಧ್ಯಾತ್ಮಿಕವಾಗಿ ವಿಶ್ವಾಸ ಮೂಡುವುದು ಅಷ್ಟು ಸುಲಭವಾದ ವಿಚಾರವಲ್ಲ. ಜೀವನದ ನಶ್ವರತೆ, ಸುಖದುಃಖವೇ ಮೊದಲಾದ ದ್ವಂದ್ವಗಳ ಬಗೆಗಿನ ಜಿಜ್ಞಾಸೆ, ಮನಸ್ಸನ್ನು ಕುರಿತ ಪ್ರಶ್ನೆಗಳು, ಸಾವಿನ ಸಮಸ್ಯೆ, ನಮ್ಮ ಅಳತೆಗೆ ಮೀರಿ ಜಗತ್ತನ್ನು ನಿಯಂತ್ರಿಸುವ ಶಕ್ತಿಯೊಂದರ ಕಲ್ಪನೆ—ಇವೆಲ್ಲ ಎಲ್ಲರ ಮನಃಪಟಲದಲ್ಲಿ ಆಧ್ಯಾತ್ಮಿಕ ವಿಶ್ವಾಸವನ್ನು ಮೂಡಿಸಲು, ಅಥವಾ ಮೂಡಿಸದಿರಲು ಕಾರಣವಾಗುತ್ತವೆ. ಕೆಲವರು ತರ್ಕದ ಹಾದಿಯಲ್ಲಿ, ಇನ್ನೂ ಕೆಲವರು ಜ್ಞಾನಾರ್ಜನೆಯ ಹಾದಿಯಲ್ಲಿ ಈ ಪ್ರಶ್ನೆಗಳಿಗೆ ಉತ್ತರವನ್ನರಸಬಹುದು. ಪರಿಣಾಮವಾಗಿ ಕೆಲವರು ಭಗವಂತನಲ್ಲಿ ವಿಶ್ವಾಸ ಹೊಂದಬಹುದು. ಈ ವಿಶ್ವಾಸ ದೃಢವಾದ ನಂತರವೇ ಅವರು ಆಧ್ಯಾತ್ಮಿಕತೆಯನ್ನು ಆಚರಣೆಗೆ ತರಲು, ವಿಧಾನಗಳನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾರೆ. ಹಲವರ ಜೀವನದಲ್ಲಿ ಈ ವಿಶ್ವಾಸ ದೃಢಗೊಳ್ಳುವಾಗ ಅವರ ಬಹುಪಾಲು ಆಯುಸ್ಸು ಕಳೆದಿರುತ್ತದೆ. ಇನ್ನು ಕೆಲವರಲ್ಲಿ ವಿಶ್ವಾಸ ದೃಢಗೊಂಡರೂ ಮುಂದಿನ ಬೆಳವಣಿಗೆ ಕುಂಠಿತವಾಗಿ ಅದು ಆಚರಣೆಯ ಹಂತಕ್ಕೆ ಬರುವುದೇ ಇಲ್ಲ. ಕೆಲವರಲ್ಲಿ ಇದು ಬಹಳ ಮೊದಲೇ ದೃಢಗೊಳ್ಳುವುದು; ಅವರು ಆಧ್ಯಾತ್ಮಿಕತೆಯನ್ನು ಆಚರಣೆಗೆ ತರಲು ಹೋರಾಡುತ್ತಾರೆ. ಆಧ್ಯಾತ್ಮಿಕ ಜೀವನ ಆರಂಭವಾಗುವುದೆ ವಿಶ್ವಾಸದಿಂದ; ಮುಂದೆ ಆ ವಿಶ್ವಾಸ ಬಲಗೊಳ್ಳುತ್ತಾ ಹೋದಂತೆ ಆಧ್ಯಾತ್ಮಿಕ ವಿಕಾಸವೂ ಹೆಚ್ಚುತ್ತ ಹೋಗುತ್ತದೆ.

## ಸಂದೇಹವಾದ, ನಾಸ್ತಿಕವಾದದ ಹಿನ್ನೆಲೆ

ಲೌಕಿಕ ಜೀವನದಲ್ಲಿ ಅವಿಶ್ವಾಸ ವ್ಯಕ್ತಿಯ ಬಗೆಗಾದರೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಭಗವಂತನ ಅಸ್ತಿತ್ವದ ಬಗೆಗೇ ಅವಿಶ್ವಾಸ ಹೊಂದುವ ಪ್ರವೃತ್ತಿ ಪ್ರಾಚೀನ ಕಾಲದಿಂದಲೂ ಕಂಡುಬಂದಿದೆ. ಸಂದೇಹದ ಮೂಲಕ ಆರಂಭವಾಗುವ ಈ ಪ್ರವೃತ್ತಿ ಅವಿಶ್ವಾಸವಾಗಿ ಮಾರ್ಪಡುತ್ತದೆ; ಕೊನೆಗೆ ದೈವವಿಶ್ವಾಸವನ್ನು ಖಂಡಿಸುವ ನಾಸ್ತಿಕತೆಯಲ್ಲಿ ಕೊನೆಗೊಳ್ಳುತ್ತದೆ. ಈ ಬಗೆಯ ನಾಸ್ತಿಕ ವಾದಗಳಿಗೆ ಹಲವು ಪರಂಪರೆಗಳಿದ್ದರೂ, ಆಧುನಿಕ ವಿಜ್ಞಾನ ಅವುಗಳಿಗೆ ಶಕ್ತಿ ನೀಡಿದರೂ, ಈ ಪ್ರಪಂಚದ ಕುರಿತು ಹಾಗೂ ಮಾನವನ ಮನಸ್ಸಿನ ಕುರಿತು ಎಲ್ಲ ಕಾಲಗಳಲ್ಲೂ ಏಳಬಹುದಾದ ಪ್ರಶ್ನೆಗಳಿಗೆ ಅವು ಉತ್ತರ ನೀಡಲಾರವು. ಈ ಹಿನ್ನೆಲೆಯಲ್ಲಿ, ನಮ್ಮಲ್ಲಿ ರೂಪುಗೊಂಡ ಉಪನಿಷತ್ತುಗಳು ಹಾಗೂ ದರ್ಶನಗಳು ನಡೆಸಿದ ಅನ್ವೇಷಣೆಗಳು ದೈವವಿಶ್ವಾಸಕ್ಕೆ ತಾರ್ಕಿಕವಾಗಿ ಬಲವಾದ ಸಮರ್ಥನೆ ನೀಡುವುವು. ಇದಕ್ಕಿಂತ ಹೆಚ್ಚಾಗಿ, ಆಧ್ಯಾತ್ಮಿಕ ಸತ್ಯಗಳ ನೇರ ಅನುಭವ ಪಡೆದ ಸಾಧುಸಂತರ ದೊಡ್ಡ ಪರಂಪರೆಯೇ ನಮ್ಮಲ್ಲಿದೆ. ತಮ್ಮ ಅನುಭವವನ್ನೇ ಆಧಾರವಾಗಿಟ್ಟುಕೊಂಡು ಅವರು ಜನತೆಗೆ ನೀಡಿದ ಸಂದೇಶಗಳು ನಮ್ಮ ದೈವವಿಶ್ವಾಸವನ್ನು ಬಲಗೊಳಿಸುವುವು. ಶ್ರೀಕೃಷ್ಣ, ಬುದ್ಧ, ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ—ಮೊದಲಾದ ಮಹಾಪುರುಷರು ಕಾಲಕಾಲಕ್ಕೆ ಜನರ ದೈವವಿಶ್ವಾಸವನ್ನು ದೃಢಗೊಳಿಸಿದರು.

## ಪ್ರಮಾಣ - ಪ್ರಮೇಯ ವಿಚಾರದ ಹಾದಿ

ನಾಸ್ತಿಕತೆ ಪ್ರತ್ಯಕ್ಷ ಹಾಗೂ ಅನುಮಾನ ಪ್ರಮಾಣಗಳನ್ನು ಆಧರಿಸಿ ದೇವರ ಅಸ್ತಿತ್ವದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುತ್ತದೆ. ಆದರೆ ಮೂರನೆಯದಾದ "ಶ್ರುತಿ"ಯನ್ನು ಮಾತ್ರ ನಿಜವಾದ ಪ್ರಮಾಣವೆನ್ನುವ ವೇದಾಂತವು ವೇದ, ಉಪನಿಷತ್ತು, ಸಾಧುಸಂತರ ವಾಣಿಗಳಿಗೆ ಪ್ರಾಮುಖ್ಯ ನೀಡುತ್ತದೆ. ಈ ಅರ್ಥದಲ್ಲಿ "ಶ್ರುತಿ" ಪ್ರಮಾಣವು ಪೂರ್ಣವಾಗಿ ವಿಶ್ವಾಸವೆಂಬ ಮನಸ್ಥಿತಿಯನ್ನೆ ಅವಲಂಬಿಸಿದೆ. ವಿಶ್ವಾಸ ಹೇಗೆ ಮೂಡುವುದು? "ಯಾರು ಏನೇ ಹೇಳಿ, ನನಗೆ ಅನುಭವವಾಗುವ ತನಕ ನಾನು ಯಾವ ದೇವರನ್ನೂ ನಂಬಲಾರೆ" ಎನ್ನುವವರಿಗೆ, "ನಿನಗೆ ಅನುಭವವಾಗಬಹುದು; ಆದರೆ ನಾನು ಹೇಳಿದ ಮಾರ್ಗವನ್ನು ಅನುಸರಿಸಬಲ್ಲೆಯಾ? ನಾನು ನಿರೀಕ್ಷಿಸುವ ನಿಷ್ಠೆ, ವಿಶ್ವಾಸ, ಪರಿಪೂರ್ಣತ್ಯಾಗ—ಇವನ್ನು ತೋರಿಸಬಲ್ಲೆಯಾ?"—ಎಂದು ಕೇಳುತ್ತದೆ "ಶ್ರುತಿ". ಅನುಭವವನ್ನೇ ಬಲವಾಗಿ ನಂಬುವವನಾದರೆ ಅವನು "ಶ್ರುತಿ"ಯ ಆಹ್ವಾನಕ್ಕೆ ಓಗೊಡಲೇಬೇಕು. "ಶ್ರುತಿ" ಅವನಿಗೊಡ್ಡುವ ಮೊದಲ ಪರೀಕ್ಷೆಯೇ—"ನೀನು 'ಶ್ರುತಿ'ಯಲ್ಲಿ ವಿಶ್ವಾಸ ಹೊಂದದೆ ಯಾವ ಅನುಭವವನ್ನೂ ಗಳಿಸಲಾರೆ. ಅದಕ್ಕೆ ನಿನ್ನನ್ನು ಪೂರ್ಣವಾಗಿ ಸಮರ್ಪಿಸಿಕೊ. ಭಗವಂತನಿಗೆ ಶರಣಾಗುವುದೊಂದೇ ನಿನಗೆ ಮಾರ್ಗ"



5

—ಎನ್ನುವುದು. ಆಧ್ಯಾತ್ಮಿಕ ಸತ್ಯಗಳಲ್ಲಿ ವಿಶ್ವಾಸ ತಾಳುವ ವ್ಯಕ್ತಿ ತಾನು ನಂಬುವ ತತ್ವಕ್ಕೆ, ದೈವಕ್ಕೆ ಸಂಪೂರ್ಣ ಶರಣಾಗುವನು. ವೈಯಕ್ತಿಕತೆ, ಸ್ವಂತಿಕೆ, ತನ್ನತನ—ಇವುಗಳನ್ನು ನಾವು ಮೊದಲು ಬೆಳೆಸಿಕೊಳ್ಳಬೇಕು, ನಿಜ. ಆದರೆ ಕೊನೆಯಲ್ಲಿ ಈ ವೈಯಕ್ತಿಕತೆಯನ್ನು ಭಗವಂತನಿಗೆ ಅರ್ಪಿಸಬೇಕು. ತನ್ನದೆಲ್ಲವನ್ನೂ ಭಗವಂತನಿಗೊಪ್ಪಿಸುವುದೇ ಸಾಧನೆಯ ಮಾರ್ಗ. ಸಾಧಕನು ವಿಶ್ವಾಸ ತಾಳಿರುವುದು ಸತ್ಯದಲ್ಲಿ; ಅದನ್ನೇ ತತ್ತ್ವ, ಭಗವಂತ ಎಂದೂ ಕರೆಯಬಹುದು. ಒಟ್ಟಿನಲ್ಲಿ, ತಾನು ನಂಬಿದ ಪರಮಸತ್ಯಕ್ಕೆ ತನ್ನನ್ನು ಸಂಪೂರ್ಣ ಸಮರ್ಪಿಸಿಕೊಳ್ಳುವುದೇ ಅವನ ನಿಜವಾದ ವಿಶ್ವಾಸದ ಗುರುತು.

### ಒಂದು ಮಹಾನ್ ಪರಿವರ್ತನೆ

ಸ್ವಾಮಿ ವಿವೇಕಾನಂದರಿಗೆ ಧರ್ಮದ ಬಗ್ಗೆ ಹಲವಾರು ಸಂದೇಹಗಳಿದ್ದವು. ದೇವರನ್ನು ನೋಡಿರುವ ವ್ಯಕ್ತಿಗಾಗಿ ಅವರು ಹುಡುಕುತ್ತಿದ್ದರು. ಕೊನೆಗೂ ಅವರಿವರ ಸಲಹೆಯ ಮೇರೆಗೆ ಅವರು ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರನ್ನು ಕಂಡರು. ಕೆಲವೇ ಭೇಟಿಗಳಲ್ಲಿ ಅವರ ಬಗ್ಗೆ ಆತ್ಮೀಯತೆ, ಕುತೂಹಲ ಮೂಡಿತಾದರೂ, ಅವರು "ಸ್ವಾಮಿ, ನೀವು ದೇವರನ್ನು ನೋಡಿರುವಿರಾ?" ಎಂಬ ಪ್ರಶ್ನೆಗೆ ಕೊಟ್ಟ ಉತ್ತರ ಯುವಕ ನರೇಂದ್ರನನ್ನು ಚಕಿತಗೊಳಿಸಿತು. ಅಷ್ಟೇ ಅಲ್ಲ, ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಸ್ಪರ್ಶ ಅವರನ್ನು ಬೇರೆಯೇ ಲೋಕಕ್ಕೊಯ್ಯಿತು. ಸ್ವಾಮಿ ವಿವೇಕಾನಂದರ ಜೀವನದಲ್ಲಿ ಇದು ಉಂಟುಮಾಡಿದ ಮಹಾನ್ ಪರಿವರ್ತನೆ ಅವರ ಸಂದೇಹಗಳಿಗೆ ಶಾಶ್ವತ ಉತ್ತರ ದೊರಕಿಸಿಕೊಟ್ಟಿತು. ಅವರಿಗೆ ದೇವರಲ್ಲಿ ವಿಶ್ವಾಸ ಮೂಡಿದ ಬಗೆ, ಅವರ ವಿಶ್ಲೇಷಣಾತ್ಮಕ ಬುದ್ಧಿ, ಗುರುವನ್ನು ಪರೀಕ್ಷಿಸಿದ ರೀತಿ—ಇವೆಲ್ಲ ಇಂದು ಚಾರಿತ್ರಿಕ ಘಟನೆಗಳಾಗಿವೆ. ಈ ಘಟನೆಗಳು ಆಧ್ಯಾತ್ಮಿಕ ಅನುಭವಗಳ ಬಗ್ಗೆ ನಮ್ಮಲ್ಲಿ ದೃಢವಿಶ್ವಾಸ ಮೂಡಿಸುತ್ತವೆ. ಇಂಥ ಪರಿವರ್ತನೆಗಳ ದೀರ್ಘಚರಿತ್ರೆಯೇ ಭಾರತದಲ್ಲಿದೆ. ಉಪನಿಷತ್ತುಗಳಲ್ಲಿ ಬರುವ ಕಥೆಗಳಿಂದ ಆರಂಭಿಸಿ ಬುದ್ಧ, ಶ್ರೀಶಂಕರ, ಜೈನಮುನಿಗಳು, ಭಕ್ತಿಪಂಥದ ಸಂತರುಗಳು, ಆಧುನಿಕ ಸಾಧುಸಂತರು—ಇವರೆಲ್ಲರ ಜೀವನದಲ್ಲಿ ಬರುವ ಅನೇಕ ಘಟನೆಗಳು ನಮ್ಮ ವಿಶ್ವಾಸವನ್ನು ಬಲಪಡಿಸುತ್ತವೆ. ಸಾಧನೆಯ ಹಾದಿಯಲ್ಲಿರುವವರಿಗೆ ಅನೇಕ ಸಲ ಸಂದೇಹ ಮೂಡುವುದು ಸಹಜ; ಅಂಥ ವೇಳೆಯಲ್ಲಿ ಇಂತಹ ಘಟನೆಗಳನ್ನು ಸ್ಮರಿಸುವುದು ಮರಳಿ ವಿಶ್ವಾಸ ಹೊಂದಲು ಉಪಯುಕ್ತ.

ನಮ್ಮಲ್ಲಿ ಶ್ರದ್ಧೆ ಅಥವಾ ವಿಶ್ವಾಸ ಜ್ವಲಂತವಾಗಿರಬೇಕು. ಅಲ್ಪ ವಿಶ್ವಾಸ, ಗಾಳಿಯಿಂದ ದೀಪ ಆರಿಹೋಗುವಂತೆ, ಯಾವುದಾದರೂ ದುರ್ಘಟನೆಯಿಂದ ಆರಿಹೋಗುತ್ತದೆ. ಆದರೆ ಶ್ರದ್ಧೆಯು ದೊಡ್ಡ ಬೆಂಕಿಯಂತೆ ಉರಿಯುತ್ತಿದ್ದರೆ ದುರ್ಘಟನೆಯ ಬಿರುಗಾಳಿ ಬೀಸಿದರೂ ಅದು ಇನ್ನೂ ಜೋರಾಗಿ ಉರಿಯತೊಡಗುತ್ತದೆ. ಆದ್ದರಿಂದ ನಾವು ಶ್ರದ್ಧೆಯನ್ನು ಹೆಚ್ಚು ಹೆಚ್ಚು ಬಲಯುತಗೊಳಿಸುತ್ತ ಹೋಗಬೇಕು. ನಾವು ಸಾಧನೆಯಲ್ಲಿ ಮುಂದುವರಿಯುತ್ತ ಹೋದಂತೆ, ನಾವು ಹೆಚ್ಚು ಹೆಚ್ಚು ಅನುಭವ ಪಡೆದಂತೆ ಶ್ರದ್ಧೆಯೂ ಅಧಿಕಾಧಿಕವಾಗುತ್ತ ಹೋಗುತ್ತದೆ.

ಶ್ರದ್ಧೆಯ ಇನ್ನೊಂದು ಮುಖ ಆತ್ಮ-ವಿಶ್ವಾಸ. ಇದಿಲ್ಲದಿದ್ದರೆ ನಾವು ಭಗವಂತನಲ್ಲಿ ಎಷ್ಟೇ ಶ್ರದ್ಧೆಯಿಟ್ಟರೂ ಪ್ರಯೋಜನವಿಲ್ಲ. ಆತ್ಮ-ವಿಶ್ವಾಸ ನಮ್ಮ ಅಂತರಂಗದ ಶಕ್ತಿಯನ್ನು ಕೆರಳಿಸುತ್ತದೆ, ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯಲು ಪ್ರೇರಣೆ ನೀಡುತ್ತದೆ. ಈ ಶ್ರದ್ಧೆಯ ಸಹಾಯದಿಂದಲೇ ನಚಿಕೇತನು ಮೃತ್ಯುವನ್ನೇ ಎದುರಿಸಿ ಆಧ್ಯಾತ್ಮಿಕ ರಹಸ್ಯವನ್ನು ಅರಿಯುತ್ತಾನೆ. "ಶ್ರದ್ಧೆಯು ಅವನನ್ನು ಪ್ರವೇಶಿಸಿತು" (ಶ್ರದ್ಧಾ ಆವಿವೇಶ) ಎಂದು ಕಠೋಪನಿಷತ್ತು ಹೇಳುತ್ತದೆ. ಆಗ ಅವನಲ್ಲಿ ಪ್ರಚಂಡ ಆತ್ಮ-ವಿಶ್ವಾಸ ಜಾಗೃತವಾಯಿತು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಆತ್ಮಶ್ರದ್ಧೆಯ ಆದರ್ಶ ನಮಗೆ ಬಹಳ ಸಹಕಾರಿ. ನಮ್ಮಲ್ಲಿ ನಮಗೆ ನಂಬಿಕೆಯನ್ನು ಹೆಚ್ಚು ಬೋಧಿಸಿದ್ದರೆ, ಅದನ್ನು ಅನುಷ್ಠಾನಕ್ಕೆ ತಂದಿದ್ದರೆ ನಮ್ಮಲ್ಲಿರುವ ಅನೇಕ ದೋಷಗಳು ಮತ್ತು ದುಃಖದ ಬಹುಭಾಗ ಮಾಯವಾಗುತ್ತಿದ್ದವು ಎಂಬುದರಲ್ಲಿ ಸಂದೇಹವಿಲ್ಲ" (ವ್ಯಕ್ತಿತ್ವ ನಿರ್ಮಾಣ, ಪು.೬೮). ಆದ್ದರಿಂದಲೆ ಸ್ವಾಮಿ ವಿವೇಕಾನಂದರು ಆತ್ಮನಿಂದೆಯನ್ನು ತೀವ್ರವಾಗಿ ಖಂಡಿಸುತ್ತಾರೆ. "ಯಾವಾತನು ತನ್ನನ್ನು ತಾನೇ ದ್ವೇಷಿಸುವುದಕ್ಕೆ, ಎಂದರೆ ಆತ್ಮನಿಂದೆ ಮಾಡಿಕೊಳ್ಳುವುದಕ್ಕೆ ಪ್ರಾರಂಭಿಸುವನೊ ಆತನು ಭ್ರಷ್ಟನಾಗುವುದಕ್ಕೆ ದಾರಿ ಆಗಲೇ ತೆರೆದಿದೆ," (ವ್ಯಕ್ತಿತ್ವ ನಿರ್ಮಾಣ ಪು. ೬೯) ಎನ್ನುತ್ತಾರೆ ಅವರು.

ಹೀಗೆ ಶ್ರದ್ಧೆ ಒಂದು ವಿಧಾಯಕ ಧೋರಣೆಯನ್ನು ಸೂಚಿಸುತ್ತದೆ. ಆತ್ಯಂತಿಕ ಸತ್ಯದ ಬಗ್ಗೆ, ಜಗತ್ತಿನ ಬಗ್ಗೆ, ಜನರ ಬಗ್ಗೆ, ಮತ್ತು ತನ್ನ ಬಗ್ಗೆ ಒಂದು ಇತ್ಯಾತ್ಮಕ ಭಾವನೆಯನ್ನು ಉಳಿಸಿಕೊಳ್ಳುವುದೇ ಶ್ರದ್ಧೆ. ನಮ್ಮ ವ್ಯಕ್ತಿತ್ವದ ಸ್ವರೂಪ ನಮ್ಮ ಶ್ರದ್ಧೆಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಭಗವದ್ಗೀತೆ ಯೋ ಯತ್ ಶ್ರದ್ಧಃ ಸ ಏವ ಸಃ (೧೭.೩)—"ಯಾರು ಎಂತಹ ಶ್ರದ್ಧೆಯವನೊ ಅವನು ಅಂಥವನೇ ಆಗುತ್ತಾನೆ," ಎನ್ನುತ್ತದೆ.

**ಜೀವನಾಧಾರಗಳು**

ಅಮಾಯಕ ಹೆಣ್ಣೊಬ್ಬಳು ತನ್ನ ಗಂಡನಿಂದ ಪರಿತ್ಯಜಿಸಲ್ಪಟ್ಟಳು. ಆಕೆಗೆ ಆಸ್ತಿಪಾಸ್ತಿ ಏನೂ ಇರಲಿಲ್ಲವಾದ್ದರಿಂದ ಆಕೆ ಜೀವನೋಪಾಯಕ್ಕಾಗಿ ಏನು ಮಾಡುತ್ತಾಳೊ ಎಂದು ಎಲ್ಲರಿಗೂ ಆಕೆಯ ಬಗ್ಗೆ ಮರುಕ ಉಂಟಾಯಿತು. ನ್ಯಾಯಾಲಯದಲ್ಲಿ ಆಕೆಯನ್ನು ನ್ಯಾಯಾಧೀಶರು, "ನಿನ್ನ ಜೀವನಕ್ಕೆ ಆಧಾರವಾಗುವ ಹಾಗೆ ಏನಾದರೂ ಇದೆಯೇ?" ಎಂದು ಕೇಳಿದರು. ಆಕೆ "ಹೌದು, ಸ್ವಾಮಿ. ನಿಜ ಹೇಳಬೇಕೆಂದರೆ ನನಗೆ ಮೂರು ಆಧಾರಗಳಿವೆ" ಎಂದಳು. ನ್ಯಾಯಾಧೀಶರು ಚಕಿತರಾಗಿ, "ಏನು ಮೂರು ಆಧಾರಗಳೇ? ಅವು ಯಾವುವು?" ಎಂದು ಕೇಳಿದರು. ಅದಕ್ಕೆ ಆಕೆ "ನನ್ನ ಕೈಗಳು, ನನ್ನ ಒಳ್ಳೆಯ ಆರೋಗ್ಯ ಹಾಗೂ ನಾನು ನಂಬಿರುವ ಭಗವಂತ" ಎಂದಳು. ಯಾರು ತಮ್ಮನ್ನು ತಾವು ಸುಧಾರಿಸಿಕೊಳ್ಳಲು ಪ್ರಯತ್ನಿಸುವರೋ ಅವರಿಗೇ ದೇವರು ನೆರವಾಗುತ್ತಾನೆ ಎಂಬುದಕ್ಕೆ ನಿದರ್ಶನವಾಗಿದ್ದಳು ಆ ಕೆಚ್ಚೆದೆಯ ಹೆಣ್ಣು.